ವಿಷಯ : ಮೂರು ರಾಜ್ಯಗಳಿಗೆ ಸೇರಿಸಿ ಪರವಾನಗಿ ಮಂಜೂರಾತಿ ನೀಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 162 (719)

ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ) :-ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ಜಿಲ್ಲೆಯು ಎರಡು ಗಡಿ ರಾಜ್ಯಗಳಿಗೆ ಹತ್ತಿರವಿದ್ದ ಹಳೆಯ ಟಾಕ್ಸಿಗಳು ಕರ್ನಾಟಕ ರಾಜ್ಯ ರಹದಾರಿಯನ್ನು ಹೊಂದಿದ್ದು, ಅಂತರರಾಜ್ಯ ರಹದಾರಿಯನ್ನು ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಸಂಚರಿಸಲು ನೀಡುವ ಪ್ರಸ್ತಾಪನೆಯು ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಜಾರಿಗೊಳಿಸುತ್ತೀರಿ?

ಶ್ರೀ.ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ವಿಷಯ : ಮೂರ್ತೆದಾರರ ಕ್ಷೇಮ ನಿಧಿ ಬಳಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 163 (679)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) :- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರ್ತೆದಾರರ ಕ್ಷೇಮ ನಿಧಿಗೆ ಸರ್ಕಾರ ಎಷ್ಟು ದೇಣಿಗೆ ಕೊಡಲಾಗಿದೆ?

ಆ) ಈ ಕ್ಷೇಮ ನಿಧಿಯನ್ನು ಯಾವ ರೀತಿಯಲ್ಲಿ ಬಳಸಲಾಗುವುದು?

ಇ) ಇದರ ಅನುಷ್ಠಾನ ಯಾವಾಗ ಮತ್ತು ಯಾರ ಮುಖೇನ ನಡೆಯುವುದು?

ಈ) ಬಡ ಮೂರ್ತೆದಾರರ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಲ್ಲಿ ರಚಿಸಲಾದ ಈ ನಿಧಿಯು ಅನುಷ್ಠಾನಗೊಳ್ಳುವುದರಲ್ಲಿರುವ ತೊಡಕುಗಳೇನು?

ಶ್ರೀ.ರಮಾನಾಥರೈ (ಅಬಕಾರಿ ರಾಜ್ಯ ಸಚಿವರು) :-

ಅ) ಮುಖ್ಯಮಂತ್ರಿಗಳು, 1994-95ರ ಆಯವ್ಯಯ ಭಾಷಣದಲ್ಲಿ ಮೂರ್ತೆದಾರರ ಕ್ಷೇಮ ನಿಧಿಗೆ ಎರಡು ಕೋಟಿ ರೂ.ಗಳನ್ನು ಕೊಡಲು ಸರ್ಕಾರ ಆಶ್ವಾಸನೆ ನೀಡಿದೆ.

ಆ) ಈ ಕ್ಷೇಮ ನಿಧಿಯಲ್ಲಿರುವ ಹಣವನ್ನು ಮೂರ್ತಿದಾರರ ಮಕ್ಕಳ ವಿದಾಭ್ಯಾಸ ಮತ್ತು ಸಾಮಾಜಿಕ ನೆರವಿಗಾಗಿ ಬಳಸಲಾಗುವುದು.

ಇ) -

ಈ) ಸರ್ಕಾರದ ಪರಿಶೀಲನೆಯಲ್ಲಿದೆ

ವಿಷಯ : ಕಾಡುಗಳ್ಳ ವೀರಪನ್ ಬಂಧನ

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ :164 (607)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಲೆಗಡುಕ, ಕಾಡುಗಳ್ಳ, ದಂತಚೋರ ವೀರಪ್ಪನ್‌ನನ್ನು ಸೆರೆ ಹಿಡಿಯುವ ಬಗ್ಗೆ ಸರ್ಕಾರಕ್ಕೆ ಇದುವರೆಗೆ ಆಗಿರುವ ಖರ್ಚು ಎಷ್ಟು?

ಆ) ಇವನಿಂದ ಆಗಿರುವ ನಷ್ಟದ ಪ್ರಮಾಣ ಎಷ್ಟು ? ಇವನನ್ನು ಯಾವಾಗ ಹಿಡಿಯಲಾಗುವುದು?

ಶ್ರೀ. ಚೌಡ ರೆಡ್ಡಿ (ಗೃಹ ಸಚಿವರು) :-

ಅ) ವೀರಪ್ಪನ್‌ನನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ಇದುವರೆಗೆ ಸುಮಾರು ರೂ.4,18,34,928 ಗಳು ಖರ್ಚಾಗಿದ್ದು, ಇದರಲ್ಲಿ ಗಡಿ ಭದ್ರತಾ ಪಡೆಗೆ 31-7-94ರ ವರೆಗೆ ಕೊಡಬೇಕಾಗಿರುವ ರೂ.1 ಕೋಟಿ 15 ಲಕ್ಷ, ಮೃತ ಪೋಲೀಸ್ ಸಿಬ್ಬಂದಿಗೆ ಪರಿಹಾರವಾಗಿ ನೀಡಿರುವ ರೂ.1.18 ಕೋಟಿ, ವೈರ್‌ಲೆಸ್ ಉಪಕರಣ, ಸಾಧನ ಸಾಮಗ್ರಿಗಳ ರಿಪೇರಿ, ಪೆಟ್ರೋಲ್ ಮತ್ತು ಡೀಸೆಲ್‌ನ ವೆಚ್ಚ ಹಾಗೂ ಸಿಬ್ಬಂದಿಯ ದಿನಭತ್ಯೆಯನ್ನು ಒಳಗೊಂಡಿರುತ್ತದೆ.

ಆ) ವೀರಪ್ಪನ್ ಮತ್ತು ಅವನ ಸಹಚರರಿಂದ ಕರ್ನಾಟಕ ತಮಿಳುನಾಡು ಗಡಿ ಪ್ರದೇಶಗಳಲ್ಲಿರುವ ಅರಣ್ಯ ಪ್ರದೇಶಗಳಲ್ಲಿ ಕಳೆದ 29 ವರ್ಷಗಳ ಅವಧಿಯಲ್ಲಿ ಸುಮಾರು 12.00 ಕೋಟಿ ರೂಪಾಯಿ ಮೌಲ್ಯದ ಆನೆ ದಂತದ ಕಳ್ಳಸಾಗಣೆಯಾಗಿದೆ ಹಾಗೂ 1984ನೇ ವರ್ಷದಿಂದ 5 ವರ್ಷಗಳ ಅವಧಿಯಲ್ಲಿ ಸುಮಾರು 125.00 ಕೋಟಿ ರೂಪಾಯಿ ಬೆಲೆಯ ಶ್ರೀಗಂಧದ ಕಳ್ಳಸಾಗಣೆಯಾಗಿದೆ. ಇದೇ ತಂಡದವರಿಂದ 1980ನೇ ಸಾಲಿನಿಂದ 1994ರ ಸಾಲಿನ ಅವಧಿಯಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗೆ ಸೇರಿದ 28 ಜನ ಪೋಲೀಸ್ ಅಧಿಕಾರಿಗಳು, 10 ಜನ ಅರಣ್ಯಾಧಿಕಾರಿಗಳು ಹಾಗೂ ಎರಡು ರಾಜ್ಯಗಳಿಗೆ ಸೇರಿದ 58 ಜನ ಸಾರ್ವಜನಿಕರು ಸೇರಿ ಒಟ್ಟು 96 ಜನರ ಕೊಲೆಯಾಗಿದೆ. ವೀರಪ್ಪನ್ ಮತ್ತು ತಂಡದ ಚಟುವಟಿಕೆಗಳಿಂದ ಸಾರ್ವಜನಿಕರಲ್ಲಿ ಉಂಟಾಗಿರುವ ಭಯ ಭೀತಿ, ಅಭಿವೃದ್ಧಿ, ಕಾರ್ಯಗಳಿಗೆ ಆಗಿರುವ ಅಡೆ ತಡೆಯು ಅಂದಾಜಿಗೆ ಮೀರಿದೆ. ಈ ತಂಡದವರ ಸುಲಿಗೆಯಿಂದ ಸಾರ್ವಜನಿಕರಿಗೆ ಸುಮಾರು ರೂ.85.00 ಲಕ್ಷಗಳು ನಷ್ಟವಾಗಿದೆ.